ಓ ಎಸ ನಂ.53/2022
ಪಿ.ಡಬ್ಲ್ಯೂ-1 ಲಕ್ಷ್ಮೀ ತಂದೆ ಅಶೋಕ ಗೋಳಸಾರ

(ಇಂದು ದಿನಾಂಕಃ 01-06-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.)

ಮುಂದುವರೆದ ಪಾಟೀ ಸವಾಲುಃ ಶ್ರೀ ಎಸ್ ಎಸ್ ಪಿ ವಕೀಲರಿಂದ.

ನಾವು ಈ ದಾವೆಯಲ್ಲಿ ಇನ್ನು ಉಳಿದ ಆಸ್ತಿಗಳನ್ನು ಹಾಕಿಲ್ಲ ಎಂದರೆ ನನಗೆ ಗೊತ್ತಿಲ್ಲ. ಸದರಿ ಆಸ್ತಿಗಳನ್ನು ಬೇರೆಯವರಿಗೆ ಮಾರಾಟ ಮಾಡಿದ್ದು ಮಾರಾಟಗಾರರನ್ನು ನಾನು ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಮ್ಮ ತಂದೆಯವರು ಓ ಎಸ್ ನಂ.38/2016 ರಲ್ಲಿ ನಮ್ಮ ತಂದೆ ಉಳಿದ ವ್ಯಕ್ತಿಗಳನ್ನು ಪಕ್ಷಗಾರರನ್ನಾಗಿ ಮಾಡುವಂತೆ ಅರ್ಜಿ ಹಾಕಿದ್ದರು ಎಂದರೆ ನನಗೆ ಗೊತ್ತಿಲ್ಲ. ನಮ್ಮ ತಂದೆ ತೀರಿದ ನಂತರ ನನ್ನ ತಾಯಿಯವರು ನಮ್ಮ ತಂದೆ ಹಾಕಿದ ಕೇಸನ್ನು ನಡೆಸಿದ್ದರು ಎಂದರೆ ಸರಿಯಲ್ಲ. ನಮ್ಮ ತಂದೆಯವರು ತೀರಿದ ನಂತರ ನನ್ನನ್ನು ಮತ್ತು ನನ್ನ ತಾಯಿ ಮತ್ತು ನನ್ನ ತಂಗಿಯನ್ನು ಸದರಿ ದಾವೆಯಲ್ಲಿ ಪಕ್ಷಗಾರರನ್ನಾಗಿ ನಮ್ಮ ತಾಯಿ ಸೇರಿಸಿದ್ದರು ಎಂದರೆ ಸರಿಯಲ್ಲ.

2. ಕೆನಾಲಗೆ ಜಮೀನನ್ನು ಸ್ವಾಧೀನಪಡಿಸಿಕೊಂಡಾಗ ಮೂವತ್ತು ಲಕ್ಷ ಎಂಬತ್ನಾಲ್ಕು ಸಾವಿರದ ಒಂದು ರೂಪಾಯಿ ಪರಿಹಾರ 1ನೇ ಪ್ರತಿವಾದಿ ಹೆಸರಿನಲ್ಲಿ ಬಂದಿತ್ತು ಎಂದರೆ ಸರಿ. ಸದರಿ ಪರಿಹಾರದ ಹಣದಲ್ಲಿ ಐದು ಲಕ್ಷ ಹದಿನೈದು ಸಾವಿರ ರೂಪಾಯಿಗಳನ್ನು 5ನೇ ಪ್ರತಿವಾದಿ ನಮ್ಮ ತಾಯಿಯ ಬ್ಯಾಂಕ ಖಾತೆಗೆ ಜಮೆ ಮಾಡಿದ್ದರು ಎಂದರೆ ಸರಿಯಲ್ಲ. ದಿನಾಂಕ 16-12-2020 ರಂದು ನಮ್ಮ ತಾಯಿ ನಾಲ್ಕು ಲಕ್ಷ ಐವತ್ತು ಸಾವಿರ ರೂಪಾಯಿಗಳನ್ನು ಕೂಡಾ ಪಡೆದಿದ್ದರು ಎಂದರೆ ಸರಿಯಲ್ಲ. ಪ್ರವೀಣ ಗುತ್ತೇದಾರ ಮತ್ತು ಬಸವರಾಜ ಪಾಟೀಲ್ ರವರ ಸಮಕ್ಷಮ ಸದರಿ ಹಣವನ್ನು ನಮ್ಮ ತಾಯಿ ಪಡೆದಿದ್ದರು ಎಂದರೆ

ಸರಿಯಲ್ಲ. ದಿನಾಂಕ 19-01-2020 ರಂದು ನಮ್ಮ ತಾಯಿ ಐದು ಲಕ್ಷ ರೂಪಾಯಿಯ ಚೆಕ್ಕನ್ನು ಕೂಡಾ 5ನೇ ಪ್ರತಿವಾದಿಯಿಂದ ಪಡೆದಿದ್ದರು ಎಂದರೆ ಸರಿಯಲ್ಲ. ನಮ್ಮ ತಾಯಿ ಪ್ರವೀಣ ಗುತ್ತೇದಾರ ಮತ್ತು ಬಸವರಾಜ ಪಾಟೀಲ್ ರವರ ಸಮಕ್ಷಮ ಒಟ್ಟು 30 ಲಕ್ಷ ಐದು ಸಾವಿರ ರೂಪಾಯಿಗಳನ್ನು ಪಡೆದುಕೊಂಡು ಓ ಎಸ್ ನಂ.38/2016 ದಾವೆಯನ್ನು ಮತ್ತು ಕ್ರಿಮಿನಲ್ ಕೇಸನ್ನು ರಾಜಿ ಮಾಡಿಕೊಂಡಿದ್ದರು ಎಂದರೆ ಸರಿಯಲ್ಲ. ಸದರಿ ವಿಚಾರಗಳು ಸರಿಯಿದ್ದರು ಪ್ರತಿವಾದಿಗಳಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದಾವೆಯನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

3. ಬಿಜಾಪೂರದಲ್ಲಿನ ಪ್ಲಾಟ ಮತ್ತು ಅತನೂರಿನಲ್ಲಿನ ಮನೆ ಮತ್ತು ಪ್ರತಿವಾದಿಗಳಿಗೆ ಬಂದ ಮನೆ ಆಸ್ತಿಗಳನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿ. ಸದರಿ ಆಸ್ತಿಗಳು ನಮ್ಮ ಒಟ್ಟು ಕುಟುಂಬದ ಆಸ್ತಿಗಳು ಆಗಿರುತ್ತವೆ ಎಂದರೆ ಸರಿಯಲ್ಲ. 1993 ರಲ್ಲಿ ವಿಭಾಗವಾಗಿದ್ದರು ಕೂಡಾ ಈಗ ನಾವು ಪ್ರತಿವಾದಿಗಳು ಅಭಿವೃದ್ಧಿಪಡಿಸಿದ ಆಸ್ತಿಗಳು ಪಡೆದುಕೊಳ್ಳುವ ಉದ್ದೇಶದಿಂದ ಒಂದು ಸುಳ್ಳು ದಾವೆ ಹಾಕಿರುತ್ತೇವೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಅದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಅಫಜಲಪೂರ.